# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕುಮಾರಿ ಉಮಾ ಆರ್.ವಿ., ಸಹಾಯಕ ಯೋಜನಾಧಿಕಾರಿ, ಕರ್ನಾಟಕ ರಾಜ್ಯ ಯೋಜನಾ ಮಂಡಳಿ ಇವರ ತಾಯಿಯವರ Total Laproscopic Hysterectomy ಶಸ್ತ್ರ ಚಿಕಿತ್ಸೆಯ ವೈದ್ಯಕೀಯ ವೆಚ್ಚದ ಮರುಪಾವತಿ ಬಗ್ಗೆ

ಓದಲಾಗಿದೆ: ಕುಮಾರಿ ಉಮಾ ಆರ್.ವಿ., ಸಹಾಯಕ ಯೋಜನಾಧಿಕಾರಿ, ಕರ್ನಾಟಕ ರಾಜ್ಯ ಯೋಜನಾ ಮಂಡಳಿ ಇವರ ಮನವಿ ದಿನಾಂಕ 26.2.2016

*****

ಕುಮಾರಿ ಉಮಾ ಆರ್.ವಿ., ಸಹಾಯಕ ಯೋಜನಾಧಿಕಾರಿ, ಕರ್ನಾಟಕ ರಾಜ್ಯ ಯೋಜನಾ ಮಂಡಳಿ ಇವರ ತಾಯಿಯವರು Total Laproscopic Hysterectomy ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ಇದಕ್ಕಾಗಿ ತಗುಲಿದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವಂತೆ ಮೇಲೆ ಓದಲಾದ ಮನವಿಯಲ್ಲಿ ಕುಮಾರಿ ಉಮಾ ಆರ್.ವಿ. ರವರು ಕೋರಿರುತ್ತಾರೆ ಹಾಗೂ ಒಟ್ಟು ರೂ.70,507/- ಗಳಿಗೆ ಬಿಲ್ಲನ್ನು ಸಲ್ಲಿಸಿರುತ್ತಾರೆ.

ಕುಮಾರಿ ಉಮಾ ಆರ್.ವಿ. ರವರ ತಾಯಿಯವರು ಉದಯ ನರ್ಸಿಂಗ್ ಹೋಮ್, ಚಿತ್ರದುರ್ಗ ಇಲ್ಲಿ ದಿನಾಂಕ 13.1.2016 ರಿಂದ 18.1.2016ರ ಅವಧಿಯಲ್ಲಿ Total Laproscopic Hysterectomy ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ವೈದ್ಯಕೀಯ ಚಿಕಿತ್ಸೆ ಪಡೆದಿರುವುದಾಗಿ ಉದಯ ನರ್ಸಿಂಗ್ ಹೋಮ್ ನ ವೈದ್ಯಾಧಿಕಾರಿಯವರು ಪ್ರಮಾಣಪತ್ರ ನೀಡಿರುತ್ತಾರೆ. ಉದಯ ನರ್ಸಿಂಗ್ ಹೋಮ್, ಚಿತ್ರದುರ್ಗ ಈ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಾಗಿರುವುದರಿಂದ, ಕರ್ನಾಟಕ ಸರ್ಕಾರಿ ನೌಕರರ ವೈದ್ಯೋಪಚಾರ ನಿಯಮಗಳು 1963ರನ್ವಯ ಪರಿಶೀಲಿಸಿದ್ದು, ಸಿಜಿಹೆಚ್‌ಎಸ್ ದರಪಟ್ಟಿಯನ್ವಯ ರೂ.25,243/-ಗಳನ್ನು ಕುಮಾರಿ ಉಮಾ ಆರ್.ವಿ., ಸಹಾಯಕ ಯೋಜನಾಧಿಕಾರಿ, ರಾಜ್ಯ ಯೋಜನಾ ಮಂಡಳಿ ರವರಿಗೆ ಮರುಪಾವತಿಸುವ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಪಿಡಿ 22 ಎಸ್‌ಪಿಐ 2016 ಬೆಂಗಳೂರು, ದಿನಾಂಕ:08.06.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕುಮಾರಿ ಉಮಾ ಆರ್.ವಿ. ರವರ ತಾಯಿಯವರು ಉದಯ ನರ್ಸಿಂಗ್ ಹೋಮ್, ಚಿತ್ರದುರ್ಗ ಇಲ್ಲಿ ದಿನಾಂಕ 13.1.2016 ರಿಂದ 18.1.2016ರ ಅವಧಿಯಲ್ಲಿ Total Laproscopic Hysterectomy ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ಸದರಿ ಚಿಕಿತ್ಸೆಗೆ ತಗುಲಿದ ವೆಚ್ಚದಲ್ಲಿ ಅರ್ಹ ಮೊತ್ತ ರೂ.25,243/- (ಇಪ್ಪತ್ತೈದು ಸಾವಿರದ ಎರಡು ನೂರ ನಲವತ್ತಮೂರು ರೂಪಾಯಿಗಳು ಮಾತ್ರ) ಗಳನ್ನು ಕುಮಾರಿ ಉಮಾ ಆರ್.ವಿ. ಇವರಿಗೆ ಮರುಪಾವತಿಸಲು ಮಂಜೂರಾತಿ ನೀಡಿದೆ.

------2

ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ ಆಯವ್ಯಯ ಲೆಕ್ಕಶೀರ್ಷಿಕೆ: "3451-00-101-4-00-021 (ವೈದ್ಯಕೀಯ ವೆಚ್ಚದ ಮರುಪಾವತಿ)" ರಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತಾ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.

ಪ್ರತಿಗೆ:

1) ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ 5329, ಬೆಂಗಳೂರು- 560 001.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಸಂಶೋಧನಾ ಸಮಾಲೋಚಕರು, ರಾಜ್ಯ ಯೋಜನಾ ಮಂಡಳಿ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ.
7) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಸರ್ಕಾರದ ಅಧೀನ ಕಾರ್ಯದರ್ಶಿ-1 & 2, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು (ಕಾಂಪೆಂಡಿಯಂಗಾಗಿ)
9) ಸಹಾಯಕ ಖಜಾನಾಧಿಕಾರಿ, ಎಸ್-3 ಶಾಖೆ, ರಾಜ್ಯ ಯೋಜನಾ ಮಂಡಳಿ, ಬಹುಮಹಡಿ ಕಟ್ಟಡ
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.